**1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.**

**ಸಿ.ಸಿ. ಸಂಖ್ಯೆ:714/2025**

**ಸಾಕ್ಷಿಯನ್ನು ದಿಃ 29.05.2026 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಪ್ರಭುಲಿಂಗಾಚಾರಿ | ಸಿಡಬ್ಲ್ಯೂ:1 | ಪಿಡಬ್ಲ್ಯೂ:1 |
| ತಂದೆಯ ಹೆಸರು | ಅಣ್ಣಯ್ಯಾಚಾರಿ | | |
| ವಯಸ್ಸು | 30 ವರ್ಷ | | |
| ಉದ್ಯೋಗ | ಕಾರ್ ಪೆಂಟರ್ ಮತ್ತು ವ್ಯವಸಾಯ | | |
| ವಾಸಸ್ಥಳ | ಮಧುಗಿರಿಕೊಪ್ಪಲು,<br>ಹುಣಸೂರು. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಅಣ್ಣಯ್ಯಾಚಾರಿ ನನ್ನ ತಂದೆ, ಅವರು ಅಪಘಾತದಲ್ಲಿ ತೀರಿಕೊಂಡಿರುತ್ತಾರೆ. ದಿಃ 27.03.2025 ರಂದು ಜಮೀನಿನಲ್ಲಿ ಕೆಲಸ ಮುಗಿಸಿಕೊಂಡು ವಾಪಸ್ಸು ಬರುವಾಗ ಸಂಜೆ 7.30 ಗಂಟೆ ಸಮಯದಲ್ಲಿ ಮೈಸೂರು-ಮಡಿಕೇರಿ ಹೆದ್ದಾರಿಯಲ್ಲಿ ನಮ್ಮ ಮನೆ ಹತ್ತಿರ ನಮ್ಮ ತಂದೆ ನಡೆದುಕೊಂಡು ಬರುವಾಗ ಹುಣಸೂರು ಕಡೆಯಿಂದ ಬಂದ ಒಂದು ಮೋಟಾರ್ ಸೈಕಲ್ ವೇಗವಾಗಿ ಬಂದು ನಮ್ಮ ತಂದೆಗೆ ಗುದ್ದಿ ಪಡಿಸಿತು. ಗುದ್ದಿದ ಶಬ್ದ ತಕ್ಷಣ ನಾನು, ನನ್ನ ತಮ್ಮ, ನನ್ನ ಚಿಕ್ಕಪ್ಪ ಚಾಸಾ 2 ಮತ್ತು 3 ರವರು ಬಂದು ನೋಡಿದೆವು. ಹಾಗೆ ವೇಗವಾಗಿ ಬಂದು ಗುದ್ದಿದ ಪರಿಣಾಮ ನಮ್ಮ ತಂದೆಯ ಮುಖಕ್ಕೆ ಮತ್ತು ಪಕ್ಕೆಗೆ ಏಟಾಗಿತ್ತು, ಕಾಲು, ಕೈ ಮುರಿದಿತ್ತು. ಬೈಕ್ ಸವಾರನಿಗೂ ಕೂಡ ಸಣ್ಣ ಪುಟ್ಟ ಏಟಾಗಿತ್ತು. ತಂದೆಯವರನ್ನು ಆಂಬ್ಯೂಲೆನ್ಸ್ ಕಾವೇರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋದೆವು. ತಂದೆಗೆ ತೀವ್ರವಾಗಿ ಎಟಾಗಿದೆ

ಎಂದು ಆಸ್ಪತ್ರೆಯವರು ದಾಖಲಿಸಿಕೊಳ್ಳಲಿಲ್ಲ, ಮೈಸೂರಿನ ಡಿ.ಆರ್.ಎಂ. ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿದೆವು. ದಿಃ 28.03.2025 ರಂದು ಬಿಳಿಕೆರೆ ಪೊಲೀಸ್ ಠಾಣೆಗೆ ಅಪಘಾತದ ಸಂಬಂಧ ದೂರು ಕೊಟ್ಟಿದ್ದೆ. ಸದರಿ ದೂರನ್ನು ನಿಪಿ. 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 1(ಎ) ಎಂದು ಗುರುತಿಸಲಾಯಿತು.

ಬೈಕ್ ಅನ್ನು ಓಡಿಸುತ್ತಿದ್ದ ಚಾಲಕನ ಹೆಸರು ನಯಾಜ್ ಅಹಮ್ಮದ್ ಎಂದು ಗೊತ್ತಾಯಿತು, ಅವರನ್ನು ನೋಡಿದರೆ ಗುರುತಿಸುತ್ತೇನೆ ಎಂದು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಆರೋಪಿ ಓಡಿಸುತ್ತಿದ್ದ ಬೈಕ್ ಅನ್ನು ನೋಡಿದರೆ ಗುರುತಿಸುತತೇನೆ, ಸದರಿ ಬೈಕ್ ಸಂಖ್ಯೆ ಅಷ್ಟಾಗಿ ನನಗೆ ಗೊತ್ತಿಲ್ಲ. ಬೈಕ್ ನ 4 ಪೋಟೊ ನೋಡಿ ಗುರುತಿಸಿದ್ದರಿಂದ, ಸದರಿ ಪೋಟೊಗಳನ್ನು ಭಾರತೀಯ ಸಾಕ್ಷ್ಯಗಳ ಅಧಿನಿಯಮ 63 (4) (ಸಿ) ಪ್ರಮಾಣ ಪತ್ರ ಹಾಜರು ಪಡಿಸಿದ್ದು, ಪೋಟೊಗಳನ್ನು ನಿಪಿ. 2 ರಿಂದ 5 ಎಂದು ಗುರುತಿಸಲಾಯಿತು. ದಿಃ 04.04.2025 ರಂದು ನಮ್ಮ ತಂದೆ ಚಿಕಿತ್ಸೆ ಫಲಕಾರಿಯಾಗದೆ ಮೃತ ಪಟ್ಟರು. ಆ ಸಂಬಂಧ ಬಿಳಿಕೆರೆ ಪೊಲೀಸ್ ಠಾಣೆಗೆ ಪುನಃ ದೂರನ್ನು ಕೊಟ್ಟಿರುತ್ತೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ. 6 ಎಂದು, ಸಾಕ್ಷಿಯ ಸಹಿಯನ್ನು ನಿಪಿ. 6(ಎ) ಎಂದು ಗುರುತಿಸಲಾಯಿತು. ಬೈಕ್ ಸವಾರನ ತಪ್ಪಿನಿಂದ ನನ್ನ ತಂದೆ ಮೃತ ಪಟ್ಟಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಈ.ಬಿ.ಆರ್ ವಕೀಲರಿಂದಃ**

ದೂರು ಕೊಡುವ ಕಾಲಕ್ಕೆ ಅಪಘಾತ ಆಗಿದೆ ಎಂದು ಹೇಳುವ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇತ್ತು. ದೂರಿನಲ್ಲಿ ಏನೆಲ್ಲಾ ಬರವಣಿಗೆ ಆಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಸದರಿ ದೂರನ್ನು ಪೊಲೀಸ್ ಠಾಣೆಯಲ್ಲಿ ತಯಾರಿಸಲಾಗಿತ್ತು. ಪೊಲೀಸ್ ಠಾಣೆಗೆ ಹೋದ ನಂತರ ಸದರಿ ದೂರನ್ನು ತಯಾರಿಸಲಾಗಿತ್ತು. ಚಾಸಾ 2 ನನ್ನ ಚಿಕ್ಕಪ್ಪ ನವರು ನನ್ನ ಜೊತೆ ಅಪಘಾತದ ಆದ ನಂತರ ಸ್ಥಳಕ್ಕೆ ಬಂದಿದ್ದರು

ಎಂದು ಇದೆ ಮೊದಲ ಬಾರಿ ಹೇಳುತ್ತಿದ್ದೇನೆ ಎಂದರೆ ಸರಿ. ಸಾಕ್ಷಿ ಪುನಃ ಪೊಲೀಸ್ ಠಾಣೆಯಲ್ಲಿ ಹೇಳಿರುತ್ತೇನೆ ಎಂದು ಹೇಳುತ್ತಾರೆ. ಹಾಗೆ ಠಾಣೆಯಲ್ಲಿ ಹೇಳದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಂಬೂಲೆನ್ಸ್ ನಲ್ಲಿ ಆಸ್ಪತ್ರೆಗೆ ತಂದೆಯನ್ನು ಕರೆದುಕೊಂಡು ಹೋಗಲಾಗಿತ್ತು ಎಂದು ಇದೆ ಮೊದಲ ಬಾರಿ ಹೇಳುತ್ತಿದ್ದೇನೆ ಎಂದರೆ ಸರಿ.

ಸಾಮಾನ್ಯವಾಗಿ ಬೈಕ್ ಸವಾರ ಅತಿವೇಗವಾಗಿ ಚಾಲನೆ ಮಾಡಿಕೊಂಡು ಹೋಗಿ ಯಾರಿಗಾದರೂ ಡಿಕ್ಕಿ ಪಡಿಸಿದರೆ ಬೈಕ್ ಸವಾರನೂ ತೀವ್ರವಾಗಿ ಗಾಯಗೊಳ್ಳುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಮೈಸೂರು – ಹುಣಸೂರು ಮುಖ್ಯ ರಸ್ತೆಯ ಪರಿಚಯ ನನಗೆ ಚೆನ್ನಾಗಿ ಇರುತ್ತದೆ. ಮಧುಗಿರಿಕೊಪ್ಪಲು ಗೇಟ್ ಹತ್ತಿರ ಸಾಕಷ್ಟು ವಾಸದ ಮನೆಗಳು ಇವೆ ಎಂದರೆ ಸರಿ. ಸರಿ ಗೇಟ್ ನಿಂದ ಮಧುಗಿರಿಕೊಪ್ಪಲು ಗ್ರಾಮಕ್ಕೆ ಹೋಗುವ ಒಂದು ರಸ್ತೆ ಕೂಡ ಇದೆ ಎಂದರೆ ಸರಿ. ಸದರಿ ರಸ್ತೆ ಮೈಸೂರು–ಹುಣಸೂರು ಮುಖ್ಯ ರಸ್ತೆಯ ಉತ್ತರ ದಿಕ್ಕಿಗೆ ಇದೆ ಎಂದರೆ ಸರಿ. ಮಧುಗಿರಿಕೊಪ್ಪಲು ಗೇಟ್ ನಿಂದ ಮಧುಗಿರಿಕೊಪ್ಪಲು ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಇರುವ ನಮ್ಮ ಮನೆ 100–150 ಮೀಟರ್ ಅಂತರದಲ್ಲಿ ಇದೆ. ಚಾಸಾ 2 ರವರ ಮನೆ ಕೂಡ ನಮ್ಮ ಮನೆಯ ಹತ್ತಿರವೆ ಇದೆ. ಅವರ ಮನೆ ಕೂಡ ಮಧುಗಿರಿ ಕೊಪ್ಪಲು ಹೋಗುವ ರಸ್ತೆಯಲ್ಲೆ ಇದೆ.

ಮೈಸೂರು–ಹುಣಸೂರು ಮುಖ್ಯ ರಸ್ತೆಯ ಮಧುಗಿರಿಕೊಪ್ಪಲು ಗೇಟ್ ನಿಂದ ಅನ್ನಪೂರ್ಣ ಹೊಟೇಲ್ 50–60 ಅಡಿ ದೂರದಲ್ಲಿ ಇದೆ. ಮೈಸೂರು–ಹುಣಸೂರು ಮುಖ್ಯ ರಸ್ತೆಯ ಮೈಸೂರು ಕಡೆಯಿಂದ ಬರುವಾಗ ಮೊದಲು ಮಧುಗಿರಿಕೊಪ್ಪಲು ಗೇಟ್ ಸಿಗುತ್ತದೆ ಎಂದರೆ ಸರಿ. ಆದಾದನಂತರ ಅನ್ನಪೂರ್ಣ ಹೊಟೇಲ್ ಇದೆ ಎಂದರೆ ಸರಿ, ಅದಾದನಂತರ ಕೃಷ್ಣ ಕೆಫೆ ಇದೆ ಎಂದರೆ ಸರಿ. ಎರಡೂ ಹೊಟೇಲ್ ಗಳು 100 ಮೀಟರ್ ಅಂತರದಲ್ಲಿ ಇವೆ. ಮಧುಗಿರಿಕೊಪ್ಪಲು ಗೇಟ್ ಮೈಸೂರು –

ಹುಣಸೂರು ಮುಖ್ಯ ರಸ್ತೆಯಲ್ಲಿ ಇದೆ. ಸದರಿ ರಸ್ತೆಯಲ್ಲಿ ಹೆಚ್ಚಿನ ವಾಹನಗಳು ಓಡಾಡುತ್ತವೆ ಎಂದರೆ ಸರಿ. ಅಲ್ಲಿ ಹೊಟೇಲ್ ಗಳು ಇರುವುದರಿಂದ ಹೆಚ್ಚಿನ ಜನ ಸಂಧಣಿ ಕೂಡ ಇರುತ್ತದೆ ಎಂದರೆ ಸರಿ. ಹುಣಸೂರು ಕಡೆಯಿಂದ ಮೈಸೂರು ಕಡೆಗೆ ಹೋಗುವ ರಸ್ತೆ, ಅಪಘಾತದ ಆಯಿತು ಎಂದು ಹೇಳುವ ರಸ್ತೆ ಏರು ಮುಖ ರಸ್ತೆ ಆಗಿರುತ್ತದೆ ಎಂದರೆ ಸರಿ. ನಮ್ಮ ಜಮೀನು ಹುಣಸೂರು–ಮೈಸೂರು ರಸ್ತೆಯಲ್ಲಿ ಹುಣಸೂರು ಕಡೆಯಿಂದ ಹೋದರೆ ಎಡಭಾಗದಲ್ಲಿ ಇರುತ್ತದೆ. ಸದರಿ ಅಪಘಾತ ಆಯಿತು ಎಂದು ಹೇಳುವ ರಸ್ತೆಯಲ್ಲಿ ಜನ ಸಂಧಣಿ ಇರುವುದರಿಂದ ಯಾವುದೆ ವಾಹನಗಳು ವೇಗವಾಗಿ ಹೋಗಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಪುನಃ ಕೃಷ್ಣ ಕೆಫೆವರೆಗೂ ಮಾತ್ರ ರಸ್ತೆ ಏರು ಮುಖವಾಗಿದೆ ಎನ್ನುತ್ತಾರೆ. ಆರೋಪಿಯನ್ನು ಇದೆ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ನೋಡುತ್ತಿರುವುದು ಎಂದರೆ ಅಪಘಾತದ ಸಮಯದಲ್ಲಿ ನೋಡಿದ್ದೆ ಎನ್ನುತ್ತಾರೆ.

ನಮ್ಮ ತಂದೆಗೆ ಅಪಘಾತದ 1-2 ನಿಮಿಷದಲ್ಲೆ ನಾನು ಸ್ಥಳಕ್ಕೆ ಬಂದಿರುತ್ತೇನೆ. ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡಿಲ್ಲ ಎಂದರೆ ಸರಿಯಲ್ಲ. ಅಪಘಾತವನ್ನು ನಾನು ಪ್ರತ್ಯಕ್ಷವಾಗಿ ನೋಡದಿದ್ದರೂ ನಾನು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ನಮ್ಮ ತಂದೆ ರಸ್ತೆಯ ಎಡಭಾಗದಲ್ಲಿ ಪುಟ್ ಪಾತ್ ನಲ್ಲಿ ನಡೆದುಕೊಂಡು ಹೋಗುವಾಗ ಅಪಘಾತ ಆಗಿರುತ್ತದೆ. ಸದರಿ ವಿಷಯವನ್ನು ಇದೆ ಮೊದಲ ಬಾರಿಗೆ ನ್ಯಾಯಾಲಯದ ಮುಂದೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ವಿಷಯವನ್ನು ಪೊಲೀಸ್ ಠಾಣೆಯಲ್ಲಿ ಹೇಳಿಲ್ಲ, ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಕೋರಿ ಕೇಸು ಹಾಕಿರುತ್ತೇನೆ ಎಂದರೆ ಸರಿ. ಪರಿಹಾರ ಕೇಸ್ ನಲ್ಲಿ ಪರಿಹಾರ ಸಿಗಲಿ ಎಂದು ಆರೋಪಿಯ ಯಾವುದೆ ತಪ್ಪು ಕಂಡು ಬರದಿದ್ದರೂ ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯ ಯಾವುದೆ ಅಜಾಗರೂಕತೆಯ ಚಾಲನೆ ಕಂಡು ಬರದಿದ್ದರೂ, ಸುಳ್ಳು ದೂರು ಸಲ್ಲಿಸಿ ಸುಳ್ಳು ಸಾಕ್ಷಿ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರೊಂದಿಗೆ ಷಾಮಿಲಾಗಿ ದಾಖಲೆಗಳನ್ನು ಸೃಷ್ಟಿಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಭಾಗ್ಯಮ್ಮ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.